# ವರ್ಣರಂಜಿತ ವಕೀಲ



■ ಪ್ರವೀಣ ಕುಲಕರ್ಣಿ

ಹೆಸರಾಂತ ವಕೀಲ ಹರೀಶ್ ಸಾಳ್ವೆ ಅವರು ಒಂದು ದಿನದ ವಕಾಲತ್ತಿಗೆ ಪಡೆಯುವ ಶುಲ್ಕ ಎಷ್ಟಿರಬಹುದು? ಹಲವು ಮೂಲಗಳು ಹೇಳುವ ಪ್ರಕಾರ, 30 ಲಕ್ಷ ರೂಪಾಯಿ! ದೇಶದ ಬಲು ದುಬಾರಿ ಹಾಗೂ ಅಷ್ಟೇ ಯಶಸ್ವಿ ವಕೀಲ ಎಂಬುದಾಗಿ ಗುರ್ತಿಸಿಕೊಂಡಿರುವ ಸಾಳ್ವೆ ಅವರ ಮಾನವೀಯ ಮುಖ ಅನಾವರಣಗೊಂಡಿದ್ದು ಪಾಕಿಸ್ತಾನದ ವಶದಲ್ಲಿರುವ ಭಾರತೀಯ ಕುಲಭೂಷಣ ಜಾಧವ್ ಅವರ ಪ್ರಕರಣದ ವಿಚಾರಣೆ ಸಂದರ್ಭದಲ್ಲಿ. ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ಜಾಧವ್ ಅವರ ಪರವಾಗಿ ವಾದ ಮಾಡಿದ ಸಾಳ್ವೆ ಅವರು ಶುಲ್ಕವಾಗಿ ಪಡೆದಿದ್ದು ಕೇವಲ ಒಂದು ರೂಪಾಯಿಯನ್ನು! ಅದೇ ಪ್ರಕರಣದಲ್ಲಿ ವಾದಿಸಲು ಪಾಕಿಸ್ತಾನ ಸರ್ಕಾರವು ತನ್ನ ವಕೀಲರಿಗಾಗಿ 20 ಕೋಟಿ ರೂಪಾಯಿ ಖರ್ಚು ಮಾಡಿತ್ತಂತೆ.

ಸಾಳ್ವೆ ಅವರ ವಕೀಲಿಕೆಯ ಕೌಶಲದ ಕುರಿತು ಎಷ್ಟೊಂದು ವರ್ಣರಂಜಿತ ಕಥೆಗಳಿವೆಯೋ ಅವರ ಬದುಕು ಕೂಡ ಅಷ್ಟೇ ವರ್ಣರಂಜಿತವಾಗಿದೆ. ಜಾತಿ–ಧರ್ಮಗಳ ಸಂಕೋಲೆಯನ್ನು ಕಿತ್ತೆಸೆದ ಮಹಾರಾಷ್ಟ್ರದ ಬಹುಧರ್ಮೀಯ ಕುಟುಂಬದ ಕುಡಿಯಾಗಿರುವ ಹರೀಶ್, ತಂದೆ ಎನ್‌ಕೆಪಿ ಸಾಳ್ವೆ ಅವರಂತೆ ರಾಜಕೀಯದ ಹಾದಿ ಹಿಡಿಯದೆ, ಅಜ್ಜ ಪಿ.ಕೆ. ಸಾಳ್ವೆ ಅವರಂತೆ ವಕೀಲಿಕೆಯತ್ತ ಒಲಿದು ಬಂದವರು. ನಾಗ್ಪುರದ ಕಾನೂನು ಕಾಲೇಜಿನಲ್ಲಿ ಓದುತ್ತಿದ್ದಾಗ ಶರದ್ ಬೊಬಡೆ (ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನಿವೃತ್ತರಾದವರು) ಇವರ ಸಹಪಾಠಿಯಾಗಿದ್ದರು. ದೇಶದ ಕಾನೂನು ಕ್ಷೇತ್ರದಲ್ಲಿ ಇಬ್ಬರೂ ಮೇರುವಾಗಿ ಬೆಳೆದವರು.

ಹೈ ಪ್ರೊಫೈಲ್ ಪ್ರಕರಣಗಳಲ್ಲಿ ವಕಾಲತ್ತು ವಹಿಸಿ, ಕಕ್ಷಿದಾರರನ್ನು ಗೆಲ್ಲಿಸುವಲ್ಲಿ ಹೆಸರಾದವರು ಸಾಳ್ವೆ. ಉದ್ಯಮಿಗಳಾದ ಮುಕೇಶ್ ಅಂಬಾನಿ ಅವರ ರಿಲಯನ್ಸ್ ಇಂಡಸ್ಟ್ರೀಸ್, ಅನಿಲ್ ಅಂಬಾನಿ ಅವರ ರಿಲಯನ್ಸ್ ನ್ಯಾಚುರಲ್ ರಿಸೋರ್ಸಸ್, ಟಾಟಾ ಸಮೂಹ, ಐಟಿಸಿ, ವೊಡಾಫೋನ್ ಸೇರಿದಂತೆ ಪ್ರಮುಖ ಕಂಪನಿಗಳ ಪರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ವಾದಿಸಿದವರು ಅವರು. ಸೈರಸ್ ಮಿಸ್ತ್ರಿ ವಿರುದ್ಧದ ಪ್ರಕರಣದಲ್ಲಿ ಸ್ವತಃ ರತನ್ ಟಾಟಾ ಅವರನ್ನು ಪ್ರತಿನಿಧಿಸಿ, ಪ್ರಕರಣ ಗೆಲ್ಲಿಸಿಕೊಟ್ಟವರು. ವೊಡಾಫೋನ್‌ಗೆ ಕೇಂದ್ರ ಸರ್ಕಾರ ಹೆಚ್ಚುವರಿಯಾಗಿ ವಿಧಿಸಿದ್ದ 11 ಸಾವಿರ ಕೋಟಿ ರೂಪಾಯಿ ತೆರಿಗೆಯನ್ನು ರದ್ದುಪಡಿಸುವಂತೆ ಕೋರ್ಟ್‌ನಲ್ಲಿ ವಾದಿಸಿ, ಅದನ್ನು ಯಶಸ್ವಿಯಾಗಿ ತಡೆದವರು ಕೂಡ. ಗುಜರಾತ್ ಗಲಭೆಯಲ್ಲಿ ಸಂತ್ರಸ್ತೆಯಾಗಿದ್ದ ಬಿಲ್ಕಿಸ್ ಬಾನೊ ಪರವಾಗಿ ವಕಾಲತ್ತು ವಹಿಸಿದ್ದ ಅವರು, ದೇಶದಾದ್ಯಂತ ಸದ್ದು ಮಾಡಿದ್ದ ಆರುಶಿ–ಹೇಮರಾಜ್ ಜೋಡಿ ಕೊಲೆ ಪ್ರಕರಣದಲ್ಲಿ ಆರೋಪಿಗಳ ಪರವಾಗಿ ವಾದ ಮಂಡಿಸಿದ್ದರು.

ನಟ ಸಲ್ಮಾನ್ ಖಾನ್ ಅವರನ್ನು ಅಧೀನ ನ್ಯಾಯಾಲಯವು ಅಪಘಾತ ಪ್ರಕರಣದಲ್ಲಿ ತಪ್ಪಿತಸ್ಥ ಎಂದು ಘೋಷಿಸಿ, ಅವರಿಗೆ ಐದು ವರ್ಷ ಜೈಲು ಶಿಕ್ಷೆ ವಿಧಿಸಿತ್ತು. ಹೈಕೋರ್ಟ್‌ನಲ್ಲಿ ಸಾಳ್ವೆ ಅವರು ಸಲ್ಮಾನ್ ಖಾನ್ ಪರ ವಾದ ಮಂಡಿಸಿದರು. ಅಧೀನ ನ್ಯಾಯಾಲಯದ ತೀರ್ಪನ್ನು ರದ್ದುಗೊಳಿಸಿದ ಹೈಕೋರ್ಟ್ ನಟನನ್ನು ಆರೋಪ ಮುಕ್ತಗೊಳಿಸಿತು. ಇಂತಹ ಹೈ ಪ್ರೊಫೈಲ್ ಪ್ರಕರಣಗಳ ಯಶಸ್ಸಿನ ಮಧ್ಯೆಯೇ ಅತ್ಯಂತ ಸೂಕ್ಷ್ಮವಾದ ಜಾಧವ್ ಪ್ರಕರಣದಲ್ಲಿ ಅಂತರರಾಷ್ಟ್ರೀಯ ಕೋರ್ಟ್‌ನಲ್ಲಿ ಘನವಾದ ವಾದ ಮಾಡಿ, ಮರಣದಂಡನೆ ಶಿಕ್ಷೆಯನ್ನು ತಪ್ಪಿಸಿದವರು ಅವರು. ಒಲಿಂಪಿಕ್‌ನಲ್ಲಿ ತೂಕದ ಕಾರಣದಿಂದ ಪದಕ ತಪ್ಪಿಸಿಕೊಂಡ ಕುಸ್ತಿಪಟು ವಿನೇಶ್ ಫೋಗಟ್ ಪರವಾಗಿ ಕ್ರೀಡಾ ಮಂಡಳಿ ಎದುರು ವಕಾಲತ್ತು ವಹಿಸಿ, ದೇಶಪ್ರೇಮ ಮೆರೆದವರು ಕೂಡ ಈ ಸಾಳ್ವೆ.

ಸುಪ್ರಸಿದ್ಧ ಜೆ.ಬಿ. ದಾದಾಚಂದ್‌ಜಿ ಮತ್ತು ಕಂಪನಿಯಲ್ಲಿ ಇಂಟರ್ನಿಯಾಗಿ ಕೆಲಸ ಶುರುಮಾಡಿದ ಅವರು, ವಕೀಲಿಕೆಯ ಪಟ್ಟುಗಳನ್ನು ಘಟಾನುಘಟಿಗಳ ಗರಡಿಯಲ್ಲಿ ಕರಗತ ಮಾಡಿಕೊಂಡವರು. ನಾನಿ ಪಾಲ್ಖಿವಾಲಾ, ಸೋಲಿ ಸೊರಾಬ್ಜಿ ಅವರ ಸಹಾಯಕರಾಗಿ ಕೆಲಸ ಮಾಡಿದ ಅವರು, ಮುಂದೆ ತಮ್ಮ ಗುರು ಏರಿದ ಸಾಲಿಸಿಟರ್ ಜನರಲ್ ಹುದ್ದೆಗೆ ತಾವೂ ಏರಿದರು. ಇಂಗ್ಲೆಂಡ್ ದೊರೆಗಳ ವಕೀಲರಾಗಿಯೂ ನೇಮಕಗೊಂಡು ದೊಡ್ಡ ಗೌರವಕ್ಕೆ ಪಾತ್ರರಾದವರು.

ಸಂಕೀರ್ಣ ಹಣಕಾಸು ವ್ಯಾಜ್ಯಗಳು, ಕ್ರಿಮಿನಲ್ ಪ್ರಕರಣಗಳು, ಕಂಪನಿಗಳ ನಡುವಿನ ತಂಟೆ ತಕರಾರುಗಳು ಇವರನ್ನೇ ಹುಡುಕಿಕೊಂಡು ಬರುವುದು ರೂಢಿ. ತುಂಬಾ ಸಂಕೀರ್ಣ ಪ್ರಕರಣಗಳೆಂದರೆ ಸಾಳ್ವೆ ಅವರಿಗೆ ಪಂಚಪ್ರಾಣವಂತೆ. ಆ ಪ್ರಕರಣದ ಸಿಕ್ಕುಗಳನ್ನು ಹತ್ತಿಯಂತೆ ಎಳೆ ಎಳೆಯಾಗಿ ಹಿಂಜಿ ತೆಗೆದು, ಕೋರ್ಟ್ ಮುಂದೆ ಸಮರ್ಥವಾಗಿ ವಾದ ಮಂಡಿಸಿ, ಗೆಲ್ಲುವ ಸವಾಲನ್ನು ಸ್ವೀಕರಿಸಲು ಸದಾ ಸಿದ್ಧರಾಗಿ ನಿಂತಿರುತ್ತಾರೆ ಎನ್ನುವುದು ಅವರ ವಕೀಲಿ ವೃತ್ತಿಗಿರುವ ಗುಣಗಾನ. ಭಾರತದ ಇತರ ಹೆಸರಾಂತ ವಕೀಲರು ವಹಿಸಿಕೊಳ್ಳಲು ಸಿದ್ಧರಿರದ ಪ್ರಕರಣಗಳನ್ನು ಹಿಂದು–ಮುಂದು ನೋಡದೆ ತೆಗೆದುಕೊಳ್ಳುವ ದಾಢಸಿ ಮನೋಭಾವ ಅವರಿಗೆ ರಕ್ತಗತ.

ನೂರಾರು ಕೋಟಿ ರೂಪಾಯಿಗಳ ಒಡೆಯ ಸಾಳ್ವೆ ಸದ್ಯ ವಾಸವಾಗಿರುವುದು ಲಂಡನ್‌ನಲ್ಲಿ. ಅವರ ಮೊದಲ ಪತ್ನಿ ಮೀನಾಕ್ಷಿ ಅವರೊಂದಿಗಿನ 38 ವರ್ಷಗಳ ಸುದೀರ್ಘ ದಾಂಪತ್ಯ 2020ರಲ್ಲಿ ಮುರಿದು ಬಿದ್ದಾಗ (ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ), ಲಂಡನ್ನಿನ ಕಲಾವಿದೆ ಕೆರೊಲಿನ್ ಬ್ರಾಸಾರ್ಡ್ ಅವರನ್ನು ವರಿಸಿದ್ದರು. ಅವರೊಂದಿಗಿನ ದಾಂಪತ್ಯ ಬಹುಕಾಲ ಮುಂದುವರಿಯಲಿಲ್ಲ. ತಮ್ಮ 68ನೇ ವಯಸ್ಸಿನಲ್ಲಿ ಸಾಳ್ವೆ ಅವರು ಟ್ರೀನಾ ಅವರೊಂದಿಗೆ ಮೂರನೇ ವಿವಾಹವಾದರು. ಅವರ ಈ ಮದುವೆಗೆ ಭಾರತದ ಹಲವು ದಿಗ್ಗಜರು ಸಾಕ್ಷಿಯಾದರು. ಇಳಿವಯಸ್ಸಿನಲ್ಲೂ ವಾದಗಳ ಸವಾಲನ್ನು ಸ್ವೀಕರಿಸಲು ಅವರು ತೋರುವ ಛಾತಿ, ಮತ್ತೆ ಮತ್ತೆ ಬಾಳ ಸಂಗಾತಿಯನ್ನು ಬದಲಿಸಿದರೂ ಜೀವನವನ್ನು ಆನಂದಿಸುವ ಅವರ ಗುಣಕ್ಕೆ ಎಲ್ಲೆ ಎಂಬುದೇ ಇಲ್ಲ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65